

ಕಲಿಯುವ ಕಲೆ.....

# ಸುಂದರಬನ

೪

ಫೋಟೋ: ಸರಸ್ವತಿ ಮೊಕಾಶಿ, ಧ್ವನಿ ಬಳಗ

**ಶಿಕ್ಷಕರು/ಮಕ್ಕಳು/ಪಾಲಕರಲ್ಲಿ ನಿವೇದನೆ:** 'ಸುಂದರಬನ'ದಲ್ಲಿ ಸುಂದರ ಕಲಿಕಾ ಅನುಭವ ಪಡೆಯಲು ಮೊದಲು ಬೆನ್ನುಪುಟ ಮತ್ತು ಆಯಾ ಪುಟಗಳಲ್ಲಿ ಕೊಟ್ಟಿರುವ 'ನಮ್ಮ ಆಶಯ'ವನ್ನು ತಾವು ಗಮನಿಸಿ. ಆ ಪ್ರಕಾರ ಚಟುವಟಿಕೆಗಳನ್ನು ಮಾಡಿರಿ/ಮಾಡಿಸಿರಿ.

**ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು :**...............................................................

**ಶಾಲೆಯ ಹೆಸರು :**...............................................................................

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
**Dhwani Educational Resource Centre**

ನವೆಂಬರ್ – ಡಿಸೆಂಬರ್ ೨೦೨೪–೨೫

ಆರಂಭ ಯೋಜನೆ
**Arambha 2024-25 Project is Supported by Many Individual Donors**

# ಕಥೆ ಕಟ್ಟೋಣ ಬನ್ನಿ





ಮುಖ ಕಲಿಕೆಗಾಗಿ








| ಭಾಷಾ ಚೌಕ |
|---|
| **ಕಾಡು – Forest** (ಫಾರೆಸ್ಟ್) |
| **ಕೊಂಬೆ/ಟೊಂಗೆ – Branch** (ಬ್ರಾಂಚ್) |
| **ಕಾಡುಪ್ರಾಣಿ – Wild animal** (ವೈಲ್ಡ್ ಆ್ಯನಿಮಲ್) |
| **ಜಿಂಕೆ – Deer** (ಡಿಅರ್) |
| **ಮೊಲ – Rabbit** (ರ್‍ಯಾಬಿಟ್) |

**ನಮ್ಮ ಆಶಯ:**
ಮೇಲಿನ ಚಿತ್ರಗಳನ್ನು ಗಮನಿಸು. ಚಿತ್ರಗಳಿಗೆ ತಕ್ಕಂತೆ ಒಂದು ಕಥೆಯನ್ನು ಕಟ್ಟಿ ಹೇಳು. ಆ ಕಥೆಯನ್ನು ಬೇರೊಂದು ಹಾಳೆಯಲ್ಲಿ ಬರೆ. ನಂತರ ಆ ಕಥೆಯನ್ನು ತರಗತಿಯಲ್ಲಿ ಹೇಳು.

# ಚುಕ್ಕಿಯಾಟ




**ನಮ್ಮ ಆಶಯ:**
1ರಿಂದ 40 ರವರೆಗಿನ ಚುಕ್ಕಿಗಳನ್ನು ಸೇರಿಸು. ನಂತರ ಮೂಡುವ ಚಿತ್ರಕ್ಕೆ ಬಣ್ಣ ತುಂಬು. ತದನಂತರ ಅದರ ಕುರಿತು ಗೆಳತಿ/ಗೆಳೆಯರೊಂದಿಗೆ ಮಾತನಾಡು.

**ಭಾಷಾ ಚೌಕ**

ಚಕ್ರ/ಗಾಲಿ – **Wheel** (ವೀಲ್)
ದಾರಿ – **Path** (ಪಾತ್)

# ಜಾಲದಾಟ

**ನಮ್ಮ ಆಶಯ:**
ಪಕ್ಕದ ಜಾಲದಾಟದಲ್ಲಿ ಆರಂಭದಿಂದ ಮುಕ್ತಾಯವನ್ನು ತಲುಪಲು ದಾರಿ ಹುಡುಕಬಲ್ಲೆಯಾ?



# ಕಲಾ–ಕ್ಷೇತ್ರ……



**ನಮ್ಮ ಆಶಯ:**
ಚಿತ್ರವನ್ನು ಗಮನಿಸಿ, ಬಣ್ಣ ತುಂಬು. ನಂತರ ಖಾಲಿ ಜಾಗದಲ್ಲಿ ಶ್ರೀಕೃಷ್ಣನ ಚಿತ್ರವನ್ನು ಬರೆದು ಬಣ್ಣ ತುಂಬು.


**ಭಾಷಾ ಚೌಕ**


**ಕೊಳಲು – Flute** (ಫ್ಲೂಟ್)
**ನವಿಲು ಗರಿ – Peacock feather** (ಪೀಕಾಕ್ ಫೆದರ್)
**ಹಾರ/ಮಾಲೆ – Wreath** (ರೀತ್)

# ನೋಡು-ಕೇಳು-ಹುಡುಕು


**ಕಣ್ಣು** ಬಹು ಮುಖ್ಯ ಇಂದ್ರಿಯ. ಕಣ್ಣುಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಬಹಳ ಅವಶ್ಯಕ. ಅವುಗಳನ್ನು ನಿಯಮಿತವಾಗಿ ಒಳ್ಳೆಯ ಹಾಗೂ ಸಾಧ್ಯವಾದರೆ ಉಗುರುಬೆಚ್ಚಗಿನ ನೀರಿನಿಂದ ತೊಳೆದುಕೊಳ್ಳಬೇಕು. ಅತಿ ತಣ್ಣಗಿನ ಅಥವಾ ಬಿಸಿ ನೀರಿನಿಂದ ತೊಳೆಯಬಾರದು. ಮೊಬೈಲ್, ಕಂಪ್ಯೂಟರ್ ಮುಂದೆ ಅತೀ ಹೆಚ್ಚು ಕೂರುವುದು, ಒಂದೇ ಸಮನೆ ಓದುವುದು ಇತ್ಯಾದಿ ಮಾಡಬಾರದು. ಮಧ್ಯೆ ಮಧ್ಯೆ ಕಣ್ಣುಗಳನ್ನು ಮಿಟುಕಿಸುತ್ತಿರಬೇಕು. ದೃಷ್ಟಿ ಅತ್ತ ಇತ್ತ ಬದಲಿಸುತ್ತಿರಬೇಕು. ಕೊನೆಯದಾಗಿ ಮತ್ತು ಅತೀ ಮುಖ್ಯವಾಗಿ, ನೀವಾಗಿಯೇ ಯಾವುಯಾವುದೋ ಔಷಧಿಗಳನ್ನು ವೈದ್ಯರ ಸಲಹೆ ಇಲ್ಲದೆಯೇ ಕಣ್ಣಿಗೆ ಹಾಕಿಕೊಳ್ಳಬಾರದು. *












‘ಅದ್ಭುತ ಯಂತ್ರ ನಮ್ಮ ದೇಹ’ ಪಾಠಕ್ಕೆ ಪೂರಕ

**ಭಾಷಾ ಚೌಕ**


| ಕನ್ನಡ | ಇಂಗ್ಲೀಷ್ | ಹಿಂದಿ | ಸಂಸ್ಕೃತ | ತಮಿಳು | ತೆಲುಗು | ಮಲೆಯಾಳಂ | ತುಳು | ಮರಾಠಿ | ಕೊಂಕಣಿ |
|---|---|---|---|---|---|---|---|---|---|
| ಕಣ್ಣು | ಐ<br>Eye | | | | | | | | |
| ಕಿವಿ | | | | | | | | | |
| ಮೂಗು | | | | | | | | | |
| ನಾಲಿಗೆ | | | | | | | | | |
| ಚರ್ಮ | | | | | | | | | |

**ನಮ್ಮ ಆಶಯ:**
ನಮ್ಮ ದೇಹದ ಪಂಚೇಂದ್ರಿಯಗಳಾದ ಕಣ್ಣು, ಮೂಗು, ಕಿವಿ, ನಾಲಿಗೆ ಮತ್ತು ಚರ್ಮ. ಇವುಗಳಲ್ಲಿ ಒಂದಾದ ಕಣ್ಣಿನ ಆರೋಗ್ಯದ ಬಗ್ಗೆ ಇರುವ ಸ್ವಲ್ಪ ಮಾಹಿತಿಯನ್ನು ಕೊಡಲಾಗಿದೆ ಓದಿಕೊ. ನಂತರ ಕಣ್ಣು ಪದಕ್ಕೆ ಬೇರೆ ಬೇರೆ ಭಾಷೆಗಳಲ್ಲಿ ಅದಕ್ಕಿರುವ ಹೆಸರುಗಳನ್ನು ಬರೆಯಲು ಪ್ರಯತ್ನಿಸು. ಉಳಿದ ಪಂಚೇಂದ್ರಿಯಗಳ ಆರೋಗ್ಯದ ಮಾಹಿತಿಯನ್ನು ಬರೆ ಮತ್ತು ಬೇರೆ ಬೇರೆ ಭಾಷೆಗಳಲ್ಲಿ ಅವುಗಳಿಗಿರುವ ಹೆಸರುಗಳನ್ನು ಭಾಷಾಚೌಕದಲ್ಲಿ ಬರೆ

# ಕಣ್ಬುರುಕು



‘ಸಾರಿಗೆ ಸಂಪರ್ಕ’ ಪಾಠಕ್ಕೆ ಪೂರಕ




| ಭಾಷಾ ಚೌಕ |
| --- |
| ರೈಲ್ವೆ – **Train** (ಟ್ರೇನ್) |
| ರೈಲ್ವೆ ಹಳಿ –**Train track** (ಟ್ರೇನ್ ಟ್ರ್ಯಾಕ್) |
| ಹೊಗೆ – **Smoke** (ಸ್ಮೋಕ್) |
| ಗಾಳಿ – **Wind** (ವಿಂಡ್) |

**ನಮ್ಮ ಆಶಯ:**

ಮೇಲಿನ ಚಿತ್ರಗಳಲ್ಲಿ ಎಂಟಕ್ಕಿಂತ ಹೆಚ್ಚು ವ್ಯತ್ಯಾಸಗಳಿವೆ ಅವುಗಳನ್ನು ಗುರುತಿಸು. ಎರಡು ಚಿತ್ರಗಳಿಗೂ ಬಣ್ಣ ತುಂಬು. ನಂತರ ಚಿತ್ರದ ಕುರಿತು ಮಾತನಾಡು.

# ಸಂಖ್ಯಾ ಬಣ್ಣದಾಟ




**ಸೂಚನಾ ಪಟ್ಟಿ**

**3** – ಹಳದಿ ಬಣ್ಣ
**4** – ಕಪ್ಪು ಬಣ್ಣ
**5** – ಕಂದು ಬಣ್ಣ
**6** – ಬೂದು ಬಣ್ಣ
**7** – ತಿಳಿನೀಲಿ ಬಣ್ಣ
**8** – ತಿಳಿಹಸಿರು ಬಣ್ಣ
**9** – ಬಿಳಿ ಬಣ್ಣ
**10** – ಕೆಂಪು ಬಣ್ಣ

**ನಮ್ಮ ಆಶಯ:**
ಚಿತ್ರದಲ್ಲಿರುವ ಕೂಡಿಸುವ ಮತ್ತು ಕಳೆಯುವ ಲೆಕ್ಕಗಳನ್ನು ಮಾಡು. ಬಂದ ಉತ್ತರಕ್ಕೆ ಸೂಚನಾ ಪಟ್ಟಿಯಲ್ಲಿ ಸೂಚಿಸಿದಂತೆ ಬಣ್ಣ ತುಂಬು. ನಂತರ ಚಿತ್ರದ ಕುರಿತು ತರಗತಿಯಲ್ಲಿ ಮಾತನಾಡು.

# ಬಣ್ಣದಾಟ



**ಭಾಷಾ ಚೌಕ**

**ಉಡುಗೊರೆ – Gift** (ಗಿಫ್ಟ್)

**ನಮ್ಮ ಆಶಯ:**
ಕೊಟ್ಟಿರುವ ಚಿತ್ರ ಯಾರದು ಎಂಬುದನ್ನು ಗುರುತಿಸಿ, ಸೂಕ್ತವಾದ ಬಣ್ಣ ತುಂಬು. ಕ್ರಿಸ್‌ಮಸ್ ಹಬ್ಬವನ್ನು ಆಚರಣೆ ಮಾಡಿರುವ/ನೋಡಿರುವ ಅನುಭವದ ಕುರಿತು ಮನೆಯ ಸದಸ್ಯರೊಂದಿಗೆ ಹಂಚಿಕೊ.

# ಬಣ್ಣದಾಟ



ಸಾಂದರ್ಭಿಕ ಚಿತ್ರ

## ಹಬ್ಬ

ಹಬ್ಬ ಬರಲು ನನ್ನ ಮನವು
ಉಬ್ಬಿ ಕುಣಿಯುವುದು ಹೊಸ ಬಟ್ಟೆ
ತೊಟ್ಟುಕೊಂಡು ನಾನು ನಲಿವೆನು

ಪುಟ್ಟ ಹಣತೆ ಹರಡಿ ಬೆಳಕು
ತಮವ ಕಳೆವದು ಪಟಾಕಿ ಗರ್ನಲ್
ಸುರುಸುರುಬತ್ತಿ ಹಚ್ಚಿ ಕುಣಿವೆನು

ತಿಂಡಿ ತಿನಿಸು ಹೋಳಿಗೆಯುಂಡು
ನಾನು ನಲಿವೆನು ಸುಖ ದುಃಖ
ಹಂಚಿಕೊಂಡು ಮನವು ನಲಿಯುವದು

ವಿವಿಧ ವೇಷ ಹಲವು ಬಣ್ಣ
ಸಮತೆ ತರುವದು ಎಲ್ಲರೊಡನೆ
ಬೆರೆಯುತಿರಲು ಹರುಷ ತರುವದು

– ಬಿ. ಎಸ್. ಜಗಾಪುರ

ಕೃಪೆ: ಬಾರಲೆ ಹಕ್ಕಿ (ಮಕ್ಕಳ ಕವನ ಸಂಕಲನ)



**ನಮ್ಮ ಆಶಯ:**
ಮೇಲೆ ಕೊಟ್ಟಿರುವ ಚಿತ್ರಕ್ಕೆ ಸೂಕ್ತವಾದ ಬಣ್ಣ ಹಚ್ಚು. ಕೊಟ್ಟಿರುವ ಹಾಡನ್ನು ಕಲಿತು ಹಾಡಲು ಪ್ರಯತ್ನಿಸು. ದೀಪಾವಳಿ ಹಬ್ಬದ ವಿಶೇಷ ತಿಂಡಿಗಳ ಹೆಸರುಗಳನ್ನು ಕೊಟ್ಟಿರುವ ಗೆರೆಯ ಮೇಲೆ ಬರೆ.


**ಭಾಷಾ ಚೌಕ**



**ಆಚರಣೆ - Celebration** (ಸೆಲೆಬ್ರೇಷನ್)
**ಊರು/ಸ್ಥಳ – Village/Place** (ವಿಲೇಜ್/ಪ್ಲೇಸ್)
**ದೀಪ – Lamp** (ಲ್ಯಾಂಪ್)
**ಸಂತಸ – Happiness** (ಹ್ಯಾಪಿನೆಸ್)
**ಬೆಳಕಿನ ಹಬ್ಬ – Festival of light** (ಫೆಸ್ಟಿವಲ್ ಆಫ್ ಲೈಟ್)



# ಹೊಂದಿಸುವ ಆಟ

**ವಾಹನಗಳು** | **ಚಲಿಸುವ ಸ್ಥಳ**




‘ನಾಡಿಗೆ ನಂಟರು’ ಮಾಲಿಕೆ ಜೊತೆ

**ನಮ್ಮ ಆಶಯ:**
ಮೇಲಿನ ಚಿತ್ರದಲ್ಲಿನ ವಾಹನಗಳ ಹೆಸರನ್ನು ಅಯಾ ಚಿತ್ರದ ಪಕ್ಕದಲ್ಲಿ ಬರೆ. ನಂತರ ಅವುಗಳು ಚಲಿಸುವ ಮಾರ್ಗವನ್ನು ಗೆರೆ ಎಳೆದು ಹೊಂದಿಸು. ಚಿತ್ರಗಳಿಗೆ ನಿನಗಿಷ್ಟವಾದ ಬಣ್ಣ ಹಚ್ಚು. ನಿನಗೆ ಗೊತ್ತಿರುವ ವಾಹನಗಳು ಹಾಗೂ ಅವು ಚಲಿಸುವ ಮಾರ್ಗವನ್ನು ಬೇರೊಂದು ಹಾಳೆಯಲ್ಲಿ ಪಟ್ಟಿಮಾಡು. ಅನಂತರ ಅವುಗಳ ಚಿತ್ರ ಬರೆ.

# ಬಣ್ಣದಾಟ



ಸಾಂದರ್ಭಿಕ ಚಿತ್ರಣ

**ನಮ್ಮ ಆಶಯ:**
ಮೇಲಿನ ರೇಖಾಚಿತ್ರ ಯಾರದ್ದೆಂಬುದನ್ನು ಗುರುತಿಸು. ಶಿಕ್ಷಕರ/ಪೋಷಕರ ಸಹಾಯದಿಂದ ಅವರ ಕುರಿತು ಮಾಹಿತಿ ಸಂಗ್ರಹಿಸಿ ಕೊಟ್ಟಿರುವ ಗೆರೆಯ ಮೇಲೆ ಬರೆ. ನಂತರ ತರಗತಿಯಲ್ಲಿ ಮಾತನಾಡು.

**ಭಾಷಾ ಚೌಕ**

**ಪತ್ರ/ಕಾಗದ/ಓಲೆ – Letter** (ಲೆಟರ್)

**ಅಂಚೆ – Post** (ಪೋಸ್ಟ್)

# ಅಂಚೆಅಣ್ಣ




'ನಾಗರ ಸಂಪರ್ಕ' ಮಾಸಿಕ ಪತ್ರಿಕೆ

**ನಮ್ಮ ಆಶಯ:**
ಕೊಟ್ಟಿರುವ ಚಿತ್ರಕ್ಕೆ ಗಮನಿಸು. ನೀನು ಅಂಚೆಕಛೇರಿಗೆ ಹೋಗಿರುವೆಯಾ? ಹೋಗಿದ್ದರೆ 50 ಪೈಸೆಯ ಅಂಚೆ ಪತ್ರವನ್ನು ಖರೀದಿಸಿ, ನಿನ್ನ ಸ್ನೇಹಿತನಿಗೆ ದೀಪಾವಳಿ ಹಬ್ಬದ ಶುಭಾಶಯ ತಿಳಿಸಲು ಒಂದು ಪತ್ರ ಬರೆದು ಅಂಚೆ ಮಾಡು. ನಿನ್ನ ಅನುಭವವನ್ನು ತರಗತಿಯಲ್ಲಿ ಹಂಚಿಕೊ.

# ನಕ್ಷಾ ಚಟುವಟಿಕೆ



ಮುರಡೇಶ್ವರ ಸಮುದ್ರತೀರ



ಆಲಮಟ್ಟಿ ಜಲಾಶಯ



ಗುಹಾಂರ ದೇವಾಲಯಗಳು – ಬಾದಾಮಿ




ಜೋಗ ಜಲಪಾತ
– ಶಿವಮೊಗ್ಗ



ವಿಧಾನಸೌಧ – ಬೆಂಗಳೂರು



‘ಪ್ರವಾಸ ಹೋಗೋಣ’ ಪಾಠಕ್ಕೆ ಪೂರಕ



ಗೋಲಗುಮ್ಮಟ – ವಿಜಯಪುರ



ಗೊಮ್ಮಟೇಶ್ವರ
– ಶ್ರವಣಬೆಳಗೋಳ



ಅರಮನೆ – ಮೈಸೂರು



ಕಲ್ಲಿನ ರಥ – ಹಂಪಿ



ಓಬವ್ವನ ಕಿಂಡಿ – ಚಿತ್ರದುರ್ಗ

**ನಮ್ಮ ಆಶಯ:**
ಇಲ್ಲಿ ಕರ್ನಾಟಕದ ಆಯ್ದ ಕೆಲವು ಐತಿಹಾಸಿಕ ಸ್ಥಳಗಳ ಚಿತ್ರಗಳಿವೆ. ಅವು ಯಾವಯಾವ ಜಿಲ್ಲೆಗಳಲ್ಲಿ ಬರುತ್ತವೆ ಎಂದು ನಕ್ಷೆಯಲ್ಲಿ ಗುರುತಿಸು.

**ಚಟುವಟಿಕೆ:** ನಿಮ್ಮೂರಿನಲ್ಲಿರುವ ಐತಿಹಾಸಿಕ ದೇವಾಲಯಗಳು, ಶಾಸನಗಳು, ಕೆರೆ, ಬಾವಿ, ಮಸೀದಿ, ಕೋಟೆಗಳು ಮುಂತಾದ ಸ್ಥಳಗಳನ್ನು ಬೇರೊಂದು ಹಾಳೆಯಲ್ಲಿ ಪಟ್ಟಿಮಾಡು. ಅವುಗಳ ಬಗ್ಗೆ ಹಿರಿಯರಿಂದ ತಿಳಿದುಕೊ.

# ಚಿತ್ರ ಬರಹ...




ಮಿತ ಕಲಿಕೆಗಾಗಿ





**ನಮ್ಮ ಆಶಯ:**
ಮೇಲಿನ ಚಿತ್ರಗಳ ಕುರಿತು ನಿನಗೆ ಅನಿಸಿದ್ದನ್ನು ನಾಲ್ಕೈದು ಸಾಲು ಬರೆ. ನಂತರ ಅವುಗಳಿಗೆ ಸೂಕ್ತವಾದ ಶೀರ್ಷಿಕೆ/ತಲೆಬರಹವನ್ನು ಕೊಡು.




# ಚಿತ್ರಕಥಾಪಟ

## (ಆಧಾರಿತ ಚಟುವಟಿಕೆ)

1. ನಿನ್ನ ಮನೆಯ ಹತ್ತಿರ ಪಕ್ಷಿಗಳನ್ನು ನೋಡಿರುವೆಯಾ? ಯಾವ ಯಾವ ಪಕ್ಷಿಗಳನ್ನು ನೋಡಿರುವೆ?

---

2. ಯಾವ ಪಕ್ಷಿಗಳ ಕೂಗುಗಳನ್ನು ಕೇಳಿರುವೆ? ಸಾಧ್ಯವಾದರೆ ಅವುಗಳ ಕೂಗುಗಳನ್ನು ಹತ್ತಿರದಿಂದ ಕೇಳಲು. ನಂತರ ಅವುಗಳಂತೆ ಕೂಗಲು ಪ್ರಯತ್ನಿಸು.

---

3. ಈ ಕಥೆಯಲ್ಲಿ ಸಮ್ಮು ಪಕ್ಷಿಗಳ ಆಹಾರಕ್ಕಾಗಿ ಮಾಡಿರುವ ವ್ಯವಸ್ಥೆಯ ಬಗ್ಗೆ ನಿನ್ನ ಅಭಿಪ್ರಾಯವೇನು?

---

4. ಕಥೆಯಲ್ಲಿ ಬರುವ ವಿರುದ್ಧ ಪದಗಳನ್ನು ಸಂಗ್ರಹಿಸಿ ಬರೆ.

---

5. ಚಿತ್ರಕಥಾಪಟದಲ್ಲಿ ನಿನಗೆ ಇಷ್ಟವಾಗಿರುವ ಯಾವುದಾದರೊಂದು ಚಿತ್ರ ಬರೆ. ಸಹಾಯಕ್ಕಾಗಿ ಚಿತ್ರಕಥಾಪಟವನ್ನು ನೋಡು.

**ನಮ್ಮ ಆಶಯ:**
ಈ ಚಟುವಟಿಕೆ ಮಾಡುವ ಮುಂಚೆ ಅಥವಾ ಮಾಡುತ್ತಿದ್ದಾಗ ಸಂಬಂಧಿತ 'ಪಕ್ಷಿ ಪ್ರೀತಿ' ಚಿತ್ರಕಥಾಪಟವನ್ನು ಇನ್ನೊಂದು ಸಲ ನೋಡು. ಓದು. ಕಥೆಯನ್ನು ಮನನ ಮಾಡಿಕೊ. ನಂತರ ಶಿಕ್ಷಕರೊಂದಿಗೆ ಮಾತನಾಡು. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.

# ಉಭಯಭಾಷಾ ಚಿತ್ರಕಥಾಪಟ

(ಆಧಾರಿತ ಚಟುವಟಿಕೆ)




1. ನಿಮ್ಮ ಊರಲ್ಲಿ ಹುಂಜವನ್ನು ಹತ್ತಿರದಿಂದ ನೋಡಿರುವೆಯಾ? ನೋಡಿದ್ದರೆ ಅವುಗಳ ಏನು ತಿನ್ನುತವೆ? ಅವುಗಳು ಹೇಗೆ ಕೂಗುತ್ತವೆ?

______________________________________________________________

2. ಈ ಮೊದಲು ಹುಂಜದ ಕಥೆಯನ್ನು ಕೇಳಿರುವೆಯಾ? ಕೇಳಿದ್ದರೆ, ಯಾರು ಹೇಳಿದ್ದರು?

______________________________________________________________

3. ನೀನೂ ಪ್ರಾಣಿ ಮತ್ತು ಪಕ್ಷಿಗಳಿಗೆ ಸಹಾಯ ಮಾಡಿರುವೆಯಾ? ಯಾವ ಯಾವ ಪ್ರಾಣಿ ಪಕ್ಷಿಗಳಿಗೆ ಸಹಾಯ ಮಾಡಿರುವೆ?

______________________________________________________________

4. ಕಥೆಯಲ್ಲಿ ಬರುವ ವಿರುದ್ಧ ಪದ ಮತ್ತು ಜೋಡಿ ಪದಗಳನ್ನು ಸಂಗ್ರಹಿಸಿ ಬರೆ.

______________________________________________________________


ಮತ್ತೆ ಕಲಿಕೆಗಾಗಿ

5. ಚಿತ್ರಕಥಾಪಟದಲ್ಲಿ ನಿನಗೆ ಇಷ್ಟವಾಗಿರುವ ಯಾವುದಾದರೊಂದು ಚಿತ್ರ ಬರೆ. ಸಹಾಯಕ್ಕಾಗಿ ಚಿತ್ರಕಥಾಪಟವನ್ನು ನೋಡು.

**ನಮ್ಮ ಆಶಯ:**
ಈ ಚಟುವಟಿಕೆ ಮಾಡುವ ಮುಂಚೆ ಅಥವಾ ಮಾಡುತ್ತಿದ್ದಾಗ ಸಂಬಂಧಿತ 'ಹುಂಜ ಮತ್ತು ಹುರುಳಿಕಾಳು' ಉಭಯಭಾಷಾ ಚಿತ್ರಕಥಾಪಟವನ್ನು ಇನ್ನೊಂದು ಸಲ ನೋಡು. ಓದು. ಕಥೆಯನ್ನು ಮನನ ಮಾಡಿಕೊ. ನಂತರ ಶಿಕ್ಷಕರೊಂದಿಗೆ ಮಾತನಾಡು. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.

# ಕರಕುಶಲ – ಕಾರ್

* ಮೊದಲು ಕಾರಿಗೆ ಕ್ರೆಯಾನ್/ಬಣ್ಣದ ಪೆನ್ಸಿಲ್‌ನಿಂದ ನಿನಗಿಷ್ಟವಾದ ಬಣ್ಣ ಹಚ್ಚು.
* ಕಾರ್ ಇರುವ ಹಾಳೆಯನ್ನು ಕತ್ತರಿಯ ಸಹಾಯದಿಂದ ಕತ್ತರಿಸಿಕೊ.
* ನಂತರ ಕಾರ್ ಸುತ್ತಲೂ ಇರುವ ದಪ್ಪ ಗೆರೆಯ ಮೇಲೆ ಕತ್ತರಿಸು.
* ಚಿತ್ರವನ್ನು ಚುಕ್ಕಿಗಳಿರುವ ಜಾಗದಲ್ಲಿ ಸರಿಯಾಗಿ, ನಿಧಾನವಾಗಿ ಮಡಚು.
* ಚಿತ್ರದ ಅಂಚಿನಲ್ಲಿ ‘ಅಂಟಿಸು’ ಬರೆದಿರುವ ಜಾಗದಲ್ಲಿ ಅಂಟಿನಿಂದ ಸರಿಯಾಗಿ ಅಂಟಿಸು.
* ಈಗ ನಿನ್ನ ಕೈಯಲ್ಲಿ ಒಂದು ಆಟಿಕೆ ಕಾರ್ ಸಿದ್ಧ. ಈ ನಿನ್ನ ಕಾರಿಗೆ ಒಂದು ಹೆಸರು ಕೊಡು.




‘ಸಾರಿಗೆ ಸಂಪರ್ಕ’ ಪಾಠಕ್ಕೆ ಪೂರಕ

# ಸರ್ವಜ್ಞನ ವಚನಗಳು

**ಅಕ್ಕಸಾಲಿಗ**

ಬೂದಿಯೊಳು ಹುದುಗಿಸುತ । ವೇದಿಸುತ ಮರೆಮಾಡಿ ।
ಕಾದಿರ್ದ ಚಿನ್ನದೊಳು ಬೆರಸಿ ಒರೆ ಹಚ್ಚಿ ।
ಊದುತಲೆ ಟೊಣೆವ ಸರ್ವಜ್ಞ

ಅಕ್ಕಸಾಲೆಯ ಮಗುವು । ಚಿಕ್ಕದೆಂದೆನಬೇಡ ।
ಚಿಕ್ಕಟವು ಮೈಯ ಕಡಿವಂತೆ ಚಿಮ್ಮಟವ ।
ನಿಕ್ಕುತಲೆ ಕಳುವ ಸರ್ವಜ್ಞ

**ಬಡಿಗ**

ಅಡ್ಡ ಬಡ್ಡಿಯು ಹೊಲ್ಲ । ಗಿಡ್ಡ ಬಾಗಿಲು ಹೊಲ್ಲ ।
ಹೆಡ್ಡರೊಡನಾಟ ತರವಲ್ಲ ಬಡಿಗ ತಾ ।
ರೊಡ್ಡನಿರ ಹೊಲ್ಲ ಸರ್ವಜ್ಞ

**ಬಣಜಿಗ**

ಎಳ್ಳು ಗಾಣಿಗ ಬಲ್ಲ । ಸುಳ್ಳು ಸಿಂಪಿಗ ಬಲ್ಲ ।
ಕಳ್ಳರನು ಬಲ್ಲ ತಳವಾರ, ಬಣಜಿಗನು ।
ಎಲ್ಲವನು ಬಲ್ಲ ಸರ್ವಜ್ಞ

**ಗಾಣಿಗ**

ಗಾಣಿಗನ ಬೇಹಾರ । ಕೋಣನ ಬೇಸಾಯ ।
ಕ್ಷೀಣಿಸುವ ಕುತ್ತ, ಸಮರ, ಕ್ಷಾಮಗಳಿಂದ ।
ಪ್ರಾಣವದು ಗಾಸಿ ಸರ್ವಜ್ಞ

**ಜೇಡ**

ಅಗ್ಗ ಬಡವಗೆ ಲೇಸು । ಬುಗ್ಗೆಯಗಸಗೆ ಲೇಸು ।
ತಗ್ಗಿನ ಗದ್ದೆ ಉಳ ಲೇಸು, ಜೇಡಂಗೆ ।
ಮಗ್ಗ ಲೇಸೆಂದ ಸರ್ವಜ್ಞ

**ಬೇಡ**

ಬೇಡಗಡವಿಯ ಚಿಂತೆ । ಆಡಿಂಗೆ ಮಳೆ ಚಿಂತೆ।
ನೋಡುವ ಚಿಂತೆ ಕಂಗಳಿಗೆ, ಹೆಳವಗೆ ।
ದ್ದಾಡುವ ಚಿಂತೆ ಸರ್ವಜ್ಞ

**ಬೆಸ್ತ**

ಕಿರಿಮೀನು ಹಿರಿಮೀನು । ಕೊರೆಕೊರೆದು ತಿಂಬಾತ ।
ಗಿರುವವನೊಬ್ಬ ಮಗ ಸಾಯೆ, ನೋವಿನ ।
ತೆರನ ತಾನರಿವ ಸರ್ವಜ್ಞ

**ಡೊಂಬ**

ಕತ್ತೆಗಂ ಕೋಡಿಲ್ಲ । ತೊತ್ತಿಂಗೆ ಗುಣವಿಲ್ಲ ।
ಹತ್ತಿಯ ಹೊಲಕೆ ಗಿಳಿಯಿಲ್ಲ, ಡೊಂಬನಿಗೆ ।
ವೃತ್ತಿಯೇ ಇಲ್ಲ ಸರ್ವಜ್ಞ

**ಆಕರ: ಸರ್ವಜ್ಞನ ವಚನಗಳು**
**ಸಂಪಾದಕರು: ಚನ್ನಪ್ಪ ಉತ್ತಂಗಿ**



**ನಮ್ಮ ಆಶಯ:**
ಮೇಲೆ ಸರ್ವಜ್ಞ ರಚಿಸಿದ ವೃತ್ತಿಗೆ ಸಂಬಂಧಿಸಿದ ಕೆಲವು ಆಯ್ದ ತ್ರಿಪದಿಗಳನ್ನು ಕೊಡಲಾಗಿದೆ. ಎಲ್ಲವನ್ನೂ ಓದಿ ಆನಂದಿಸು. ನಂತರ ತರಗತಿಯಲ್ಲಿ ಸರ್ವಜ್ಞನ ತ್ರಿಪದಿಗಳಲ್ಲಿ ಬಂದಿರುವ ವೃತ್ತಿಗಳ ವೇಷಭೂಷಣ ಧರಿಸಿ ಅಭಿನಯಿಸಲು ಪ್ರಯತ್ನಿಸು.

# ದ್ವಿಭಾಷಾ – ಪದಕೋಶ

**'ಕನ್ನಡ-ಇಂಗ್ಲೀಷ್' ಅರ್ಥಪಟ್ಟಿ ೧**


| ಕನ್ನಡ | ಇಂಗ್ಲೀಷ್ | ಕನ್ನಡ | ಇಂಗ್ಲೀಷ್ |
|---|---|---|---|
| ಸೊಂಡಿಲು | Trunk (ಟ್ರಂಕ್) | ಸಂಪರ್ಕ | (ಕಮ್ಯೂನಿಕೇಷನ್) Communication |
| ದೂರದರ್ಶನ | Television (ಟೆಲಿವಿಷನ್) | ನೇಕಾರ | Weaver (ವೀವರ್) |
| ಅಂಚೆ ಕಚೇರಿ | Post - office (ಪೋಸ್ಟ್ ಆಫೀಸ್) | ಪುರಾಣ | Myth (ಮಿತ್) |
| ಹೋರಾಟ | Battle (ಬ್ಯಾಟ್‌ಲ್) | ವಾರ್ತಾಪತ್ರಿಕೆ | Newspaper (ನ್ಯೂಸ್‌ಪೇಪರ್) |
| ಝುರಿ | Streamlet (ಸ್ಟ್ರೀಅಮ್ಲೆಟ್) | ಸೊಸೆ | Daughter-in-law (ಡಾಟರ್-ಇನ್-ಲಾ) |
| ಕಾಂಡ | Stem (ಸ್ಟೆಮ್) | ಚಮ್ಮಾರ | Cobbler (ಕಾಬ್ಲರ್) |
| ಬಿಸಿಲು | Sunny (ಸನಿ) | ಅಂತರಾಷ್ಟ್ರೀಯ | International (ಇಂಟರ್ ನ್ಯಾಷನಲ್) |

**'ಕನ್ನಡ-ಇಂಗ್ಲೀಷ್' ಅರ್ಥಪಟ್ಟಿ ೨**

| ಕನ್ನಡ | ಇಂಗ್ಲೀಷ್ | ಕನ್ನಡ | ಇಂಗ್ಲೀಷ್ |
|---|---|---|---|
| ನೃತ್ಯಗಾರ್ತಿ | | ಕಾರ್ಯಕ್ರಮ | |
| ರೈಲು ನಿಲ್ದಾಣ | | ಅಜ್ಜ | |
| ಬಟ್ಟೆ | | ಬರಹಗಾರ | |
| ನಾಟಕ | | ಸೋದರ ಮಾವ | |
| ಪ್ರವಾಸ | | ಯುದ್ಧ | |
| ದೂರವಾಣಿ | | ಪ್ರವಾಸ | |
| ದೂರವಾಣಿ | | ಗಣಕಯಂತ್ರ | |
| ಚಕ್ಕಡಿ | | ನೇಗಿಲು | |

**ನಮ್ಮ ಆಶಯ:**
ಮೇಲೆ ಕೊಟ್ಟಿರುವ 'ಕನ್ನಡ – ಇಂಗ್ಲೀಷ್' ಅರ್ಥಪಟ್ಟಿ ೧ ಗಮನಿಸು. ಅದರಲ್ಲಿ ಕನ್ನಡ – ಪರಿಸರ ಅಧ್ಯಯನಕ್ಕೆ ಸಂಬಂಧಿಸಿದ ಪದಗಳಿಗೆ ಇಂಗ್ಲೀಷ್ ಸಮಾನಾರ್ಥಕ ಪದಗಳನ್ನು ಕೊಡಲಾಗಿದೆ. ಓದಿ ಅರ್ಥಮಾಡಿಕೊ. ನಂತರ 'ಕನ್ನಡ – ಇಂಗ್ಲೀಷ್' ಅರ್ಥಪಟ್ಟಿ ೨ರಲ್ಲಿ ಕೇವಲ ಕನ್ನಡ ಪದಗಳನ್ನು ಕೊಡಲಾಗಿದೆ. ಅವುಗಳಿಗೆ ಇಂಗ್ಲೀಷ್ ಸಮಾನಾರ್ಥಕ ಪದಗಳನ್ನು ಬರೆ. ಅದಕ್ಕಾಗಿ ಉತ್ತಮ ಅರ್ಥಕೋಶದ ಸಹಾಯವನ್ನು ಪಡೆ.

ಆರಂಭ



ಮುಕ್ತಾಯ

## ರೈಲು ಗಾಡಿ

ಗಡಗಡ ಸದ್ದನು ಮಾಡುತ ಗಾಡಿ
ಎರಡಳೆ ದಾರಿಯ ಸೀಳುತ ಗಾಡಿ
ಉರುಳುತ ಮೆಲ್ಲನೆ ಬಂದಿತು ಗಾಡಿ
ಕಾರುತ ಹೊಗೆಯ ನಿಂದಿತು ಗಾಡಿ॥

ಗದ್ದಲ ಗದ್ದಲ ಎಲ್ಲೆಡೆ ಗದ್ದಲ
ಹೆಜ್ಜೆಯ ಸಪ್ಪಳ ಮಾತಿನ ಉಪಟಳ
ಚಿಟ್ಟನೆ ಚೀರುವ ಮಕ್ಕಳ ಉಪಟಳ
ಕೂಗೇ ಕೂಗು ಎಲ್ಲೇಡೆಗೂ॥


ಪತ್ರಿಕೆ ಮಾರುವ ಹುಡುಗರ ಕೂಗು
ಮಿಠಾಯಿ ಮಾರುವ ಮಾಣಿಯ ಕೂಗು
ಮೂಟೆ ಹೊರುವ ಮಾಲಿಯ ಕೂಗು
ಗದ್ದಲ ಗಡಿಬಿಡಿ ಎಲ್ಲೆಡೆಗೂ॥

ಗಾರ್ಡಿನ ಸೀಟಿ ಕೇಳಿತು ಭರದಿ
ಹಸಿರು ಪತಾಕೆ ಹಾರಿತು ದೂರದಿ
ಕೂಗನು ಹಾಕುತ ಹೊರಟಿತು ಗಾಡಿ
ಹೊಗೆಯನು ಉಗುಳುತ ಮೈಸೂರ್ ಗಾಡಿ॥

**– ಡಿ. ಪದ್ಮಲತಾ**
**ಆಕರ: ಬಾಲವಾಡಿ ಗೀತೆಗಳು**
**ಸಂಕಲನಕಾರರು: ಕೆ.ಆರ್.ಕೆ.ಮೂರ್ತಿ**

**ನಮ್ಮ ಆಶಯ:**
ಕೊಟ್ಟಿರುವ ಒಂದೇ ಭಾರತ್ ರೈಲ್ವೆ ಜಾಲದಾಟದಲ್ಲಿ ಆರಂಭದಿಂದ ಮುಕ್ತಾವನ್ನು ತಲುಪಲು ಬೇಕಾಗುವ ಸಮಯವನ್ನು ಲೆಕ್ಕ ಹಾಕು. ನಂತರ ಕೊಟ್ಟಿರುವ ಹಾಡನ್ನು ಕಲಿತು ಹಾಡು. ನೀನು ರೈಲಿನಲ್ಲಿ ಪ್ರಯಾಣಿಸಿದ್ದರೆ, ಆ ಅನುಭವವನ್ನು ಗೆಳೆಯ/ಗೆಳತಿಯರೊಂದಿಗೆ ಹಂಚಿಕೊ.

# ಮಂಡಲ ಕಲೆ



ಮಿಚಿ ಕಲಿಕೆಗಾಗಿ

**ನಮ್ಮ ಆಶಯ:**
ಕೊಟ್ಟಿರುವ ಚಿತ್ರವನ್ನು ಗಮನಿಸು. ಅದಕ್ಕೆ ಸೂಕ್ತ ಬಣ್ಣ ತುಂಬು. ನಂತರ ನಿನ್ನ ಅನುಭವವನ್ನು ಸ್ನೇಹಿತರೊಂದಿಗೆ ಹಂಚಿಕೊ.

ಉದಾ:

* **ಹಸು ಹೊಲದಲ್ಲಿ ಮೇಯುತ್ತಾ ಇದೆ. – ಆಕಳು ಹೊಲದಾಗ ಮೇಯಲಿಕ್ಕತೈತಿ.**
* **ಮಳೆ ತುಂಬಾ ಜೋರಾಗಿ ಬರುತ್ತಿದೆ. – ಮಳಿ ಭಾಳಾ ಜೋರಾಗಿ ಬರಾಕತೈತಿ.**

* ಸಿನೇಮಾ ತುಂಬ ಚೆನ್ನಾಗಿದೆ. – ..........................................................................
* ಊಟ ತುಂಬ ಚೆನ್ನಾಗಿತ್ತು. – ..........................................................................
* ಪರೀಕ್ಷೆಯಲ್ಲಿ ನಾನು ತುಂಬಾ ಚೆನ್ನಾಗಿ ಬರೆದಿದ್ದೇನೆ. – ..........................................................................
* ನಮ್ಮೂರ ಜಾತ್ರೆ ಎಂದರೆ ನನಗೆ ಬಹಳ ಇಷ್ಟ. – ..........................................................................
* ಅವಳು ತುಂಬ ಜಾಣೆ ಇದ್ದಾಳೆ. – ..........................................................................
* ಹೊಟ್ಟೆ ತುಂಬ ಊಟ ಮಾಡಿದೆಯಾ? – ..........................................................................
* ನನ್ನ ಹಿಂದೆ ನೀನು ಬರಬೇಡ. – ..........................................................................
* ನಿನ್ನ ತಲೆ ಸರಿ ಇದೆಯಾ? – ..........................................................................
* ಅಲ್ಲಿ ಒಂದು ದೇವಸ್ಥಾನ ಉಂಟಲ್ಲಾ; ಅದರ ಎದುರಿನದೇ ನಮ್ಮ ಮನೆ. – ..........................................................................
* ನಿಮಗೆ ಇನ್ನೊಂದೆರಡು ಒಬ್ಬಟ್ಟು ಹಾಕಲಾ? – ..........................................................................
* ಹಣತೆಯಲ್ಲಿ ತುಂಬಾ ಎಣ್ಣೆ ಹಾಕಿದ್ದಾರೆ. – ..........................................................................
* ಏನಮ್ಮಾ ಹೇಗಿದ್ದೀಯಾ? – ..........................................................................
* ನಾನು ದಿನಾಲೂ ಬೆಳಿಗ್ಗೆ ಏಳುತ್ತೇನೆ. – ..........................................................................
* ಊಟಕ್ಕೆ ಬಡಿಸಲಾ? – ..........................................................................
* ಆಟೋ ನಾಯಿಗೆ ಢಿಕ್ಕಿ ಹೊಡೆಯಿತು. – ..........................................................................
* ಈಗ ಬೆಳಗಾಗುತ್ತಿದೆ. – ..........................................................................
* ಏನಮ್ಮಾ ತಿಂಡಿ ಆಯಿತಾ? – ..........................................................................
* ಬನ್ನಿ, ಕುಳಿತುಕೊಳ್ಳಿ – ..........................................................................
* ಅಣ್ಣ ಸಂಡಾಸಕ್ಕೆ ಹೋಗಿದ್ದಾನೆ. – ..........................................................................

**ನಮ್ಮ ಆಶಯ:**

ಮೇಲೆ ಕೊಟ್ಟಿರುವ ಮಾತುಗಳನ್ನು (ವಾಕ್ಯಗಳನ್ನು) ನಿಮ್ಮಲ್ಲಿ ಹೇಗೆ ಹೇಳುತ್ತಿರಾ?/ ಹೇಳತಾರೆ? ಎಂಬುದನ್ನು ಹೇಳುವ ರೀತಿಯಲ್ಲಿಯೇ ಬರೆ. ಉದಾಹರಣೆಗಳನ್ನು ಗಮನಿಸು. ನಂತರ ಇವುಗಳ ಜೊತೆ ನಿಮ್ಮ ಊರಿನಲ್ಲಿ ಕನ್ನಡದ ಬಗ್ಗೆ ಇನ್ನಷ್ಟು ವಿಶೇಷತೆಗಳಿದ್ದರೆ ಶಿಕ್ಷಕರ ಸಹಾಯದೊಂದಿಗೆ ಅವುಗಳನ್ನು ಸಂಗ್ರಹಿಸು. ಸಾಧ್ಯವಾದರೆ ಧ್ವನಿಗೂ ಪತ್ರ ಬರೆ.

# ಕಥಾಸಮಯ



ಖುಷಿ ಕಲಿಕೆಗಾಗಿ

**ಕಾಡು, ಕೆರೆ, ಗಿಳಿ, ನರಿ, ಮರಗಳು, ಕೊಂಬೆ, ಸ್ನೇಹಿತ, ಮೊಲ, ತಾವರೆ(ಕಮಲ), ಕಪ್ಪೆ, ಉಡ, ಅಳಿಲು**

**ನಮ್ಮ ಆಶಯ:**
ಮೇಲಿನ ಚಿತ್ರವನ್ನು ಆಧರಿಸಿ ಕೊಟ್ಟಿರುವ ಪದಗಳನ್ನು ಬಳಸಿಕೊಂಡು ಒಂದು ಕಥೆಯನ್ನು ಕಟ್ಟಿ ಗೆರೆಯ ಮೇಲೆ ಬರೆ. ನಂತರ ಕಥೆಯನ್ನು ತರಗತಿಯಲ್ಲಿ ಹೇಳು.

**ಭಾಷಾ ಚೌಕ**

ಗಿಣಿ – **Parrot** (ಪ್ಯಾರಟ್)
ಕೊಕ್ಕು – **Beak** (ಬೀಕ್)
ಬಾಲ – **Tail** (ಟೇಲ್)
ಕಮಲ/ತಾವರೆ – **Lotus** (ಲೋಟಸ್)

# ಕಣ್ಣರಳಿಸಿ ನೋಡು





ಖುಷಿ ಕಲಿಕೆಗಾಗಿ



# ನೋಡು–ಮಾಡು





**ನಮ್ಮ ಆಶಯ:**

ಕೊಟ್ಟಿರುವ ಚಿತ್ರವನ್ನು ಗಮನಿಸು. ಅದರಂತೆ ನೀನು ಬಳಕೆಗೆ ಬಾರದ ಸಿಡಿ ಕ್ಯಾಸೆಟ್‌ಗಳು, ಐಸ್ಕ್ರೀಮ್ ಕಡ್ಡಿಗಳು, ಅಲ್ಯುಮಿನಿಯಂ ತಂತಿ ಮತ್ತು ಅಂಟು(ಪೆವಿಕಾಲ್) ಬಳಸಿಕೊಂಡು ಒಂದು ಸೈಕಲ್ ಮಾಡಲು ಪ್ರಯತ್ನಿಸು.

**'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ**

**ನಮ್ಮ ಆಶಯ:**
೪ನೇ ತರಗತಿಯ ಮಕ್ಕಳಿಗಾಗಿಯೇ ವಿಶೇಷವಾಗಿ ರೂಪಿಸಲಾದ 'ಸುಂದರಬನ'ದಲ್ಲಿನ ಚಟುವಟಿಕೆ – ಆಟ ಇತ್ಯಾದಿಗಳೆಲ್ಲ ಸಾಧ್ಯವಾದಷ್ಟು ಮಟ್ಟಿಗೆ ಕನ್ನಡ – ಪರಿಸರ ಅಧ್ಯಯನ – ಗಣಿತ ವಿಷಯಗಳಿಗೆ ಪೂರಕವಾಗಿ ರೂಪುಗೊಂಡಿವೆ ಎಂಬುದನ್ನು ತಾವು ಗಮನಿಸಬೇಕು.

ಇಲ್ಲಿನ ಕೆಲವು ಚಿತ್ರಗಳನ್ನು ವಿವಿಧ ಅಂತರ್ಜಾಲ ತಾಣಗಳಿಂದ ಕೃತಜ್ಞತಾಪೂರ್ವಕವಾಗಿ ತೆಗೆದುಕೊಂಡು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ.

**ಸಂಪರ್ಕ ಮಾಹಿತಿ**
ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬, 'ಪುಷ್ಪಾಂಜಲಿ'
೩ನೇ ಅಡ್ಡರಸ್ತೆ, ಶಿವಗಿರಿ
ಧಾರವಾಡ – ೫೮೦ ೦೦೭
ಮೊ: ೯೯೮ ೬೬೬ ೧೦೫೫
dhwanitrust@gmail.com
www.dhwanitrust.org

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.